ದಿನಾಂಕಃ 31.01.2026

ಅಸಲುದಾವಃ 48/2015

ಡಿ.ಡಬ್ಲ್ಯೂ: 4

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳನ್ನು ನಾನೇ ನಮ್ಮ ವಕೀಲರಿಗೆ ಹೇಳಿ ವಿವರಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಿಡಿ 81 ನಮ್ಮ ಕುಟುಂಬದ ವಂಶವೃಕ್ಷವಾಗಿರುತ್ತದೆ. ನಿಡಿ 82 ಮತ್ತು 83 ನಮ್ಮ ತಾಯಿಯ ಹೆಸರಿಗೆ ಬಂದ ಎಂ.ಆರ್ ಮತ್ತು ಪಹಣಿಯಾಗಿರುತ್ತದೆ. ನಿಡಿ 84 4 ಆರ್.ಟಿ.ಸಿ ಗಳು ನನ್ನ ದೊಡ್ಡ ತಾತ ದಾಸಶೆಟ್ಟಿ ಬಿನ್ ಕೆಂಪಶೆಟ್ಟಿಯಿಂದ ನನ್ನ ತಾಯಿಯ ಹೆಸರಿಗೆ ಬಂದ ಆರ್.ಟಿ.ಸಿಗಳಾಗಿರುತ್ತವೆ. ನಿಡಿ 85 ನನ್ನ ತಾಯಿಯ ಹೆಸರಿನಲ್ಲಿರುವ ಕಂಪ್ಯೂಟರ್ ಆರ್.ಟಿ.ಸಿಗಳಾಗಿರುತ್ತವೆ. ನಿಡಿ 86 ರಿಂದ 90 ಆರ್.ಟಿ.ಸಿಗಳು ನನ್ನ ತಾಯಿ ತಮ್ಮ ಹೆಸರಿನಲ್ಲಿ ಇದ್ದ ಸ್ವತ್ತನ್ನು ಮಾರಾಟ ಮಾಡಿದ್ದು, ಸದರಿ ಸ್ವತ್ತಿನ ಖರೀದಿದಾರರ ಹೆಸರಿನಲ್ಲಿ ಬರುತ್ತಿರುವ ಆರ್.ಟಿ.ಸಿಗಳಾಗಿರುತ್ತವೆ.

**ಪಾಟೀ ಸವಾಲುಃ ವಾದಿ ಪರ ವಕೀಲರ ವಿನಂತಿಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,

ಮದ್ದೂರು.